ದಿನಾಂಕ **11-10-2022** ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ-**4** ಮತ್ತು **5** ಪರ ಆರ್.ಜಿ. ವಕೀಲರವರಿಂದ

ವಾದಿ-1 ಮತ್ತು ಭೀಮರಾವ ನನ್ನ ಅಣ್ತಮಕಿ ಆಗಬೇಕು. ಸರ್ವೆ ನಂ. 32 ಸರ್ವೆ ನಂಃ 35 ರ ಪಶ್ಚಿಮಕ್ಕೆ ಇದೆ. ಸರ್ವೆ ನಂಃ 35 ರ ಉತ್ತರಕ್ಕೆ ಶಂಕರ ಪಾಟೀಲ ಅವರ ಜಮೀನು ಇದ್ದು ಅದರ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂಃ 35 ರ ದಕ್ಷಿಣಕ್ಕೆ ಪ್ರತಿವಾದಿ-4 ಅವರ ಜಮಿನು ಇದೆ. ಅವರ ಜಮೀನಿನ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂಃ 35 ರ ಪಶ್ಚಿಮಕ್ಕೆ ವಿಠಲರಾವ ಅವರ ಜಮೀನು ಇದ್ದು ಅದರ ಜಮೀನಿನ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ.

ಸರ್ವೆ ನಂ. 35 ರಲ್ಲಿ ವಾದಿಗಳನ್ನು ಹೊರತು ಪಡಿಸಿ ಬೇರೆ ಪಟ್ಟೆದಾರರು ಇರುತ್ತಾರೆಂದರೆ ಸಾಕ್ಷಿ ನನಗೆ ಇಬ್ಬರು ಪಟ್ಟೆದಾರರು ಇರುತ್ತಾರೆಂದು ಹೇಳುತ್ತಾರೆ. ಅವರುಗಳೆಂದರೆ ಬಾಪು ಮತ್ತು ಭೀಮರಾವ ಆಗಿರುತ್ತಾರೆ. ಸರ್ವೆ ನಂಃ 36 ರಲ್ಲಿ ಎಷ್ಟು ಜನ ಪಟ್ಟೆದಾರ ಮತ್ತು ಮಾಲೀಕರಿರುವರೆಂದರೆ ಸಾಕ್ಷಿ ಪ್ರತಿವಾದಿ-2 ಮತ್ತು 3 ಇದ್ದು ಉಳಿದವರ ಹೆಸರು ನನಗೆ ಗೊತ್ತಿರುವುದಿಲ್ಲವೆಂದು ಹೇಳುತ್ತಾರೆ.

ವಾದಿಗಳಿಗೆ ಸರ್ವೆ ನಂಃ 35 ಅನ್ನು ಹೊರತು ಪಡಿಸಿ ಬೇರೆ ಜಮೀನುಗಳು ಇವೆಯಾ ಎಂದರೆ ಸಾಕ್ಷಿ ಅವರಿಗೆ ಬೇರೆ ಜಮೀನು ಇದ್ದ ಬಗ್ಗೆ ಇದೆ ಎಂದು ಹೇಳಿ ನನಗೆ ಹೇಳಲು ಬರುವುದಿಲ್ಲವೆಂದು ಹೇಳುತ್ತಾರೆ. ಸರ್ವೆ ನಂಃ 35 ರಲ್ಲಿ ವಾದಿ-1 ಎಷ್ಟು ಎಕರೆ ಎಷ್ಟು ಗುಂಟೆ ಜಮೀನಿನ ಮಾಲೀಕರಿರುತ್ತಾರೆಂದರೆ ಸಾಕ್ಷಿ ನನಗೆ ಹೇಳಲು ಬರುವುದಿಲ್ಲವೆಂದು ಹೇಳುತ್ತಾರೆ. ಅದೇ ರೀತಿ ಸರ್ವೆ ನಂಃ 35 ರಲ್ಲಿ ವಾದಿ-2 ಮತ್ತು 3 ಅವರು ಎಷ್ಟು ಎಕರೆ ಎಷ್ಟು ಗುಂಟೆ ಜಮೀನಿನ ಮಾಲೀಕರಿರುತ್ತಾರೆಂದರೆ ಸಾಕ್ಷಿ ನನಗೆ ಹೇಳಲು ಬರುವುದಿಲ್ಲವೆಂದು ಹೇಳುತ್ತಾರೆ.

ಸಾಕ್ಷಿ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ಸರ್ವೆ ನಂಃ 36 ರ ಮಾಲೀಕರು ಎಂದು ಬರೆಯಿಸಿದ್ದು ಯಾರು ಯಾರು ಎಷ್ಟು ಎಕರೆ ಎಷ್ಟು ಗುಂಟೆ ಜಮೀನಿನ ಮಾಲೀಕರು ಆಗಿರುತ್ತಾರೆಂದು ನನಗೆ ಹೇಳಲು ಬರುವುದಿಲ್ಲ.

ನಾನು ವಿದ್ಯಾಭ್ಯಾಸ ಕಲಿತಿರುವುದಿಲ್ಲ. ನನಗೆ ಮರಾಠಿ ಓದಲು ಮತ್ತು ಬರೆಯಲು ಬರುವುದಿಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಸೆಟಲಮೆಂಟ್ ಡಿಡ್ ಬಗ್ಗೆ ಹೇಳಿದ್ದು ಅದರಲ್ಲಿ ಎನು ಬರೆದಿದೆಯೆಂದು ಹೇಳಲು ಬರುವುದಿಲ್ಲವೆಂದರೆ ಸಾಕ್ಷಿ ನನಗೆ ಹೇಳಲು ಬರುವುದಿಲ್ಲವೆಂದು ಹೇಳುತ್ತಾರೆ. ಸೆಟಲಮೆಂಟ್ ಡಿಡ್ ನಲ್ಲಿ ಎನೂ ಬರೆದಿದೆಯೆಂದು ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

ಸಾಕ್ಷಿಗೆ ಸೆಟಲಮೆಂಟ್ ಡಿಡ್ ಗೆ ಸಹಿ ಮಾಡುವ ಸಮಯದಲ್ಲಿ ಕಾಗದ ಖಾಲಿ ಇತ್ತೋ ಅಥವಾ ಅದರಲ್ಲಿ ಬರೆದಿದ್ದು ಇತ್ತೋ ಎಂದರೆ ಸಾಕ್ಷಿ ಸೆಟಲಮಂಟ್ ಡಿಡ್ ಅನ್ನು ಬರೆದಿದ್ದು ನಂತರ ನನಗೆ ಸುಲಾನಮಾ ಎಂದು ಹೇಳಿದ್ದು ನಾನು ಸಹಿ ಮಾಡಿರುತ್ತೇನೆಂದು ಹೇಳುತ್ತಾರೆ. ಸೆಟಲಮೆಂಟ್ ಡಿಡ್ ಅನ್ನು ತುಕ್ಕಾಮಣಿ ತಂದೆ ನಾಮದೇವರಾವ ಅವರು ಬರೆದಿರುತ್ತಾರೆ. ಸೆಟಲಮೆಂಟ್ ಡಿಡ್ ನಲ್ಲಿ ಯಾರು ಯಾವ ಜಮೀನಿನ ಮಾಲೀಕರು ಎಂದು ಬರೆದಿರುವುದಿಲ್ಲವೆಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲವೆಂದು ಹೇಳುತ್ತಾರೆ. ನನಗೆ ದಾವಾ ಸ್ವತ್ತಿನ ಬಗ್ಗೆ ಮತ್ತು ಸೆಟಲಮೆಂಟ್ ಡಿಡ್ ನ ಬಗ್ಗೆ ಎನೂ ಮಾಹಿತಿ ಇಲ್ಲದಿದ್ದರೂ ಸಹ ನಾನು ವಾದಿಗಳ ಮಾತು ಕೇಳಿ ಸುಳ್ಳುಪ್ರಮಾ ಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ
ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).**

**(ಓ.ಹೇ.ಕೇ.ಸ.ಇದೆ)** ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಬಸವಕಲ್ಯಾಣ

ಸಾಕ್ಷಿದಾರರ ಸಹಿ